**ಸಾಕ್ಷಿಯನ್ನು ದಿನಾಂಕ 28.03.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಪಿ ಎಸ್ ಬಿ ವಕೀಲರಿಂದಃ**

ನಾನು ಮತ್ತು ವಾದಿ ಒಂದೇ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿಯಲ್ಲ. ನನ್ನ ಜೊತೆ ನನ್ನ ಹೆಂಡತಿ ಇದ್ದಾರೆ. ವ್ಯವಸಾಯವನ್ನು ಈಗ ವಾದಿ ಮಾಡುತ್ತಾರೆ. ಊರಿನಲ್ಲಿರುವ ಜಮೀನಿನ ಸ.ನಂ.52/ಪಿ 2 ರಲ್ಲಿ 2 ಎಕರೆ, ಸ.ನಂ.192 ರಲ್ಲಿ 3 ಎಕರೆ 35 ಗುಂಟೆ, ಸ.ನಂ.194/6 ರಲ್ಲಿ 16 ಗುಂಟೆ, ಸ.ನಂ.194/9 ರಲ್ಲಿ 16 ಗುಂಟೆ, ಸ.ನಂ.184 ರಲ್ಲಿ 15 ಗುಂಟೆ, ಸ.ನಂ.3 ರಲ್ಲಿ 20 ಗುಂಟೆ ಇರುತ್ತವೆ. ಆ ಜಮೀನುಗಳನ್ನು ನಮ್ಮ ತಂದೆ ಸಂಪಾದಿಸಿದ್ದರು. ನಮ್ಮ ತಂದೆ ಬದುಕಿದ್ದಾಗ ಮನೆಯ ಯಜಮಾನ ನಮ್ಮ ತಂದೆಯಾಗಿದ್ದರು ಎಂದರೆ ಸರಿ.

2. ನಮ್ಮ ತಂದೆ ತೀರಿಕೊಂಡು 30 ವರ್ಷಗಳ ಮೇಲೆ ಆಗಿದೆ. 30 ವರ್ಷಗಳಿಂದ ಮನೆಯ ಯಜಮಾನಿಕೆಯನ್ನು ನಾನೇ ನೋಡಿಕೊಂಡು ಬರುತ್ತಿದ್ದೇನೆ. 30 ವರ್ಷಗಳ ಯಜಮಾನಿಕೆಯಲ್ಲಿ ಜಮೀನುಗಳಿಂದ ಬಂದ ಆದಾಯದ ಲೆಕ್ಕ ಪತ್ರಿಕೆಗಳನ್ನು ಇಟ್ಟಿಲ್ಲ. ನಮ್ಮ ತಂದೆ ಸಂಪಾದನೆ ಮಾಡಿದ ಜಮೀನುಗಳನ್ನು ಹೊರತುಪಡಿಸಿ ನಾನು ಒಂದು ಜಮೀನನ್ನು ಸಂಪಾದಿಸಿದ್ದೆ ಅದನ್ನು ಅರಣ್ಯ ಇಲಾಖೆಯವರು ಕಿತ್ತುಕೊಂಡಿರುತ್ತಾರೆ. ಆ ಜಮೀನನ್ನು ನಾನು ಯಾರಿಂದಲೂ ಖರೀದಿಸಿಲ್ಲ ಅಕ್ರಮವಾಗಿ ವ್ಯವಸಾಯ ಮಾಡುತ್ತಿದ್ದೆ ಎಂದರೆ ಸರಿ.

3. 30 ವರ್ಷಗಳಿಂದ ಜಮೀನುಗಳಲ್ಲಿ ಏನೆಲ್ಲಾ ಬೆಳೆ ಬೆಳೆಯುತ್ತಿದ್ದೆ ಎಂದು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸಾಕ್ಷಿ ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಹಾಕುತ್ತೇವೆ, ಚೀಟಿ ನೀಡುತ್ತಾರೆ ಎಂದು ನುಡಿಯುತ್ತಾರೆ. ಪಹಣಿಗಳಲ್ಲಿ ಬೆಳೆದ ಬೆಳೆಗಳ ವಿವರಗಳನ್ನು ಸರ್ಕಾರದವರು ನಮೂದು ಮಾಡುತ್ತಾರೆ ಎಂದರೆ ಸರಿ. 30 ವರ್ಷಗಳಿಂದ ಬೆಳೆದ ಬೆಳೆಗಳ ಬಗ್ಗೆ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನಾನು ಮೇಲೆ ಹೇಳಿದ 6 ಜಮೀನುಗಳನ್ನು ಹೊರತು ಪಡಿಸಿ ಬೇರೆ ಆದಾಯ ನಮ್ಮ ಕುಟುಂಬಕ್ಕೆ ಇರಲಿಲ್ಲ ಎಂದರೆ ನಿಜ.

4. ನನ್ನ ಮಗ ವೆಂಕಟಶಿವ ಮದುವೆ ಆಗುವ ಮೊದಲೇ ಬೆಂಗಳೂರಿಗೆ ಹೋಗಿದ್ದ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. 1987_1988 ರಿಂದಲೂ ನನ್ನ ಮಗ ವೆಂಕಟಶಿವ ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ 1987_1988 ರಿಂದ ಬೆಂಗಳೂರಿನಲ್ಲಿ ವಾಸವಿದ್ದ ಬಗ್ಗೆ ದಾಖಲೆಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ವೆಂಕಟಶಿವ ಕೆಲಸ ಮಾಡುತ್ತಿದ್ದ ಕಂಪನಿಯವರು ಪ್ರತಿ ತಿಂಗಳು ವೇತನ ನೀಡುತ್ತಿದ್ದರು ಎಂದರೆ ಸುಳ್ಳು.

5. ಈ ಕೇಸಿನಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಸಲ್ಲಿಸಿದ್ದ ತಕರಾರಿನ ವಿಚಾರ ನನಗೆ ಗೊತ್ತು. ನನ್ನ ಮಗ ವೆಂಕಟಶಿವ ರವರ ಬ್ಯಾಂಕ್ ಖಾತೆಯ ಬಗ್ಗೆ ತಿಳಿದುಕೊಂಡಿದ್ದೇನೆ. ನನ್ನ ಮಗನ ಖಾತೆಯಲ್ಲಿ ಲಕ್ಷಾಂತರ ರೂಪಾಯಿಗಳ ವಹಿವಾಟು

ಕಂಡು ಬರುತ್ತದೆ ಎಂದರೆ ಸರಿ, ಸಾಕ್ಷಿ ಮನೆಯಿಂದ ಮಾವಿನ ಕಾಯಿಗಳಿಗೆ ಫ್ಯಾಕ್ಟರಿಗೆ ಕಳುಹಿಸುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ಮಗನ ಖಾತೆಗೆ ಮಾವಿನ ಕಾಯಿಗಳನ್ನು ಮಾರಾಟ ಮಾಡಿದ್ದರಿಂದ ಹಣ ಜಮೆ ಆಗಿದೆ ಎಂಬ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಎಂದಿಗೂ ಮಾವಿನ ಕಾಯಿಗಳನ್ನು ಕಳುಹಿಸಿಲ್ಲ, ಅದರ ಬಾಬತ್ತು ಹಣ ನನ್ನ ಮಗ ವೆಂಕಟಶಿವ ರವರ ಖಾತೆಗೆ ಜಮೆ ಆಗಿಲ್ಲ ಎಂದರೆ ಸರಿಯಲ್ಲ.

6. ನನ್ನ ಪ್ರತಿವಾದಿ ಪತ್ರದಲ್ಲಿ ನನ್ನ ಮಗ ವೆಂಕಟಶಿವ ರವರ ಖಾತೆಗೆ ಇಂತಹ ತಾರೀಖುಗಳಂದು ಮಾವಿನ ಕಾಯಿಗಳನ್ನು ಮಾರಾಟ ಮಾಡಿದ ಹಣ ಜಮೆ ಆಗಿದೆ ಎಂದು ಹೇಳಿಲ್ಲ. ನಾನು ಹೇಳಿದ 6 ಜಮೀನುಗಳ ಪೈಕಿ 3 ಜಮೀನುಗಳ ಮೇಲೆ ಸಾಲ ಇರುತ್ತದೆ. ಸಾಲ ಎಷ್ಟು ಇದೆ ಎಂದು ಸುಮಾರು ದಿನಗಳು ಆಗಿರುವುದರಿಂದ ನನಗೆ ನೆನಪಿಲ್ಲ. ಆ ಸಾಲವನ್ನು ಪೂರ್ತಿ ಸಂದಾಯ ಮಾಡಿಲ್ಲ. ಆ ಸಾಲ ಎಷ್ಟು ವರ್ಷಗಳಿಂದ ಬಾಕಿ ಇದೆ ಎಂದು ಹೇಳಲು ಆಗುವುದಿಲ್ಲ, ಬಿಲ್ಡಿಂಗ್ ನಿರ್ಮಿಸಲು ಪ್ರಾರಂಭಿಸಿದಾಗಿನಿಂದಲೂ ಆ ಸಾಲ ಇದೆ.

7. ನಾನು ಮತ್ತು ವಾದಿ ವಾಸವಿರುವ ಮನೆ ನನ್ನ ಹೆಸರಿನಲ್ಲಿ ಇರುತ್ತದೆ. ನಾನಡು ಊರಿನಲ್ಲಿ ನಿರ್ಮಿಸಿದ ಮನೆಗೆ ಸಾಲವನ್ನು ಬ್ಯಾಂಕಿನಿಂದ ಮಾಡಿದ್ದೆ. ನನ್ನ ತಂದೆ 6 ಜಮೀನುಗಳನ್ನು ಬಿಟ್ಟು ಹೋದ ನಂತರ, ಮನೆಯನ್ನು ನಿರ್ಮಿಸಲು ಸಾಲ ಮಾಡಿರುವುದರಿಂದ ಜಮೀನುಗಳಿಂದ ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ

ಸರಿಯಲ್ಲ. ಮನೆಯನ್ನು ನಿರ್ಮಿಸಲು ನನ್ನ ಬಳಿ ಹಣ ಇತ್ತು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇಲ್ಲ ಎಂದರೆ ಸಾಕ್ಷಿ ಪಾಸ್ ಪುಸ್ತಕ ನೋಡಿದರೆ ಹಣ ಇರುವ ಬಗ್ಗೆ ತಿಳಿದು ಬರುತ್ತದೆ ಎಂದು ನುಡಿಯುತ್ತಾರೆ. ಮನೆಯನ್ನು 4 ರಿಂದ 5 ವರ್ಷಗಳ ಹಿಂದೆ ನಿರ್ಮಿಸಿದ್ದೇನೆ. 4 ರಿಂದ 5 ವರ್ಷಗಳ ಹಿಂದಿನ ಪಾಸ್ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

8. ನಾನು ಹಾಜರುಪಡಿಸಿರುವ ನಿಡಿ 5 ಪಾಸ್ ಪುಸ್ತಕದಲ್ಲಿ ಕೇವಲ 2015 ಮತ್ತು 2016 ನೇ ಸಾಲಿನ ವಹಿವಾಟು ಮಾತ್ರ ಇದೆ ಎಂದರೆ ನನಗೆ ಗೊತ್ತಿಲ್ಲ. 2015 ಮತ್ತೂ 2016 ನೇ ಸಾಲಿಗಿಂತ ಮೊದಲಿನ ಮತ್ತು ನಂತರದ ಯಾವುದೇ ಪಾಸ್ ಪುಸ್ತಕವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಯಾವುದೇ ವ್ಯವಹಾರ ಇಲ್ಲದ ಕಾರಣ ನನಗೆ ಬ್ಯಾಂಕಿನಲ್ಲಿ ಯಾವುದೇ ವಹಿವಾಟು ಆಗಿಲ್ಲ ಎಂದರೆ ಸರಿಯಲ್ಲ.

9. ನನ್ನ ಮಗ ವೆಂಕಟಶಿವ ಬೆಂಗಳೂರಿನಲ್ಲಿ ಸೈಟುಗಳನ್ನು ಖರೀದಿಸುವ ಮತ್ತು ಮಾರಾಟ ಮಾಡುವ ವ್ಯವಹಾರ ಮಾಡುತ್ತಿದ್ದ ಎಂದರೆ ಸುಳ್ಳು. ಸೈಟುಗಳನ್ನು ಮಾರಾಟ ಮಾಡುತ್ತಿದ್ದ ಹಣ ನನ್ನ ಮಗನ ಖಾತೆಗೆ ಜಮೆ ಆಗುತ್ತಿತ್ತು ಎಂದರೆ ಸುಳ್ಳು. ನನ್ನ ಮಗ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸುಳ್ಳು. ಸಂಬಳದ ಹಣ ಸಹ ನನ್ನ ಮಗ ವೆಂಕಟಶಿವ ರವರ ಖಾತೆಗೆ ಜಮೆ ಆಗುತ್ತಿತ್ತು ಎಂದರೆ ಸುಳ್ಳು. ನನ್ನ ಮಗ ವೆಂಕಟಶಿವ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರು ಎಂದರೆ ಸುಳ್ಳು. ನನ್ನ ಮಗ

ವೆಂಕಟಶಿವ ತನಗೆ ಬರುತ್ತಿದ್ದ ಸಂಬಳ ಮತ್ತು ರಿಯಲ್ ಎಸ್ಟೇಟ್ ಹಣದ ವಿವರಗಳನ್ನು ತನ್ನ ಆದಾಯ ತೆರಿಗೆ ಪಾವತಿಯಲ್ಲಿ ತೋರಿಸಿದ್ದಾರೆ ಎಂದರೆ ಸುಳ್ಳು.

10. ನನ್ನ ಮಗ ವೆಂಕಟಶಿವ ರವರ ಮಾವ ಬೆಂಗಳೂರಿನಲ್ಲಿ ದೊಡ್ಡ ಜಮೀನುದಾರ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ವೆಂಕಟಶಿವ ರವರ ಮಾವನಿಗೆ ಇಬ್ಬರು ಹೆಣ್ಣು ಮಕ್ಕಳು. ನನ್ನ ಮಗ ವೆಂಕಟಶಿವ ರವರ ಮಾವನವರು ನನ್ನ ಮಗನಿಗೆ ಬೆಂಗಳೂರಿನಲ್ಲಿ ಆಸ್ತಿಗಳನ್ನು ಖರೀದಿಸಿ ಕೊಟ್ಟಿದ್ದಾರೆ ಎಂದರೆ ಸುಳ್ಳು. ನನ್ನ ಮಗ ವೆಂಕಟಶಿವ ರವರಿಗೆ ಬೆಂಗಳೂರಿನಲ್ಲಿ ಬೋರ್ ವೆಲ್ ಇರುವ ಮನೆಯ ಜಾಗ ಇದೆ ಎಂದರೆ ಸಾಕ್ಷಿ ಬೋರ್ ವೆಲ್ ನ್ನು ನಾನು ಹಾಕಿಸಿಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ಬೋರ್ ವೆಲ್ ನ್ನು ನಾನು ಹಾಕಿಸಿಕೊಟ್ಟ ಬಗ್ಗೆ ದಾಖಲೆ ಇಲ್ಲ ಎಂದರೆ ಕೆನರಾ ಬ್ಯಾಂಕ್ ನಿಂದ ರೂ.5 ಲಕ್ಷ ಸಾಲ ಪಡೆದು ಕೊಟ್ಟಿದ್ದೇನೆ, ಆ ಸಾಲಕ್ಕೆ ನನ್ನ ಮಗ ಸಹ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಕೆನರಾ ಬ್ಯಾಂಕ್ ನಲ್ಲಿ ರೂ.5 ಲಕ್ಷ ಸಾಲ ಪಡೆದ ಬಗ್ಗೆ ಮತ್ತು ನನ್ನ ಮಗ ಆ ಸಾಲಕ್ಕೆ ಸಹಿ ಹಾಕಿದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸಾಲ ಪಾವತಿಯಾಗದ ಕಾರಣ ಬ್ಯಾಂಕಿನವರು ದಾಖಲೆಯನ್ನು ನೀಡುವುದಿಲ್ಲ ಎಂದು ನುಡಿಯುತ್ತಾರೆ.

11. ನನ್ನ ಮಗ ವೆಂಕಟಶಿವ ರವರ ಹೆಸರಿನಲ್ಲಿರುವ ಜಾಗದಲ್ಲಿ ಬೋರ್ ವೆಲ್ ನ್ನು ಅಂದಾಜು 2004 ಅಥವಾ 2005 ರಲ್ಲಿ ಹಾಕಿಸಿರಬಹುದು. ನನ್ನ ಮಗ ವೆಂಕಟಶಿವರವರಿಗೆ 2004 ಮತ್ತು 2005 ರಲ್ಲಿ ಕೆಲಸದಿಂದ ಸಂಬಳ ಬರುತ್ತಿತ್ತು ಆ

ಹಣದಿಂದ ಬೋರ್ ವೆಲ್ ಹಾಕಿಸಿದ್ದರು ಎಂದರೆ ಸುಳ್ಳು. 2004 ಮತ್ತು 2005 ನೇ ಸಾಲಿನಲ್ಲಿ ವೆಂಕಟಶಿವ ರವರ ಬ್ಯಾಂಕ್ ಖಾತೆಯಲ್ಲಿ ಲಕ್ಷಾಂತರ ಹಣ ಇತ್ತು ಎಂದರೆ ಸುಳ್ಳು. ವೆಂಕಟಶಿವ ರವರ ಬ್ಯಾಂಕ್ ಖಾತೆಯಲ್ಲಿ 2010 ರಿಂದ ರೂ.1,75,00,646/ ಹಣ ಇರುವುದು ಕಂಡುಬರುತ್ತದೆ ಎಂದರೆ ಸುಳ್ಳು. ಸಾಕ್ಷಿ ಆತನ ಖರ್ಚಿಗೆ ಹಣವನ್ನು ಸಹ ನಾನೇ ಕೊಡುತ್ತಿದ್ದೆ ಎಂದು ಸ್ವತಃ ನುಡಿಯುತ್ತಾರೆ.

12. 2011 ರಲ್ಲಿ ನನ್ನ ಮಗ ವೆಂಕಟಶಿವ ರವರ ಖಾತೆಯಲ್ಲಿ ರೂ.2 ಕೋಟಿಗೂ ಅಧಿಕ ಹಣ ಇರುವುದು ಕಂಡುಬರುತ್ತದೆ ಎಂದರೆ ಸುಳ್ಳು. 2014 ರಲ್ಲಿ ನನ್ನ ಮಗ ವೆಂಕಟಶಿವ ರವರ ಖಾತೆಯಲ್ಲಿ ರೂ.4 ಕೋಟಿಗೂ ಅಧಿಕ ಹಣ ಇತ್ತು ಎಂದರೆ ಸುಳ್ಳು. ಆತನ ಖರ್ಚಿನ ನಾನು ಹಣ ನೀಡುತ್ತಿದ್ದೆ ಎಂದು ಹೇಳುವುದು ಸುಳ್ಳು ಎಂದರೆ ಸಾಕ್ಷಿ ಆತನಿಗೆ ನಾನು ಬ್ಯಾಂಕ್ ಮೂಲಕ ಹಣ ಕಳುಹಿಸುತ್ತಿದ್ದೆ ಎಂದು ನುಡಿಯುತ್ತಾರೆ. ಬ್ಯಾಂಕ್ ನ ಮೂಲಕ ನಾನು ನನ್ನ ಮಗ ವೆಂಕಟಶಿವ ರವರಿಗೆ ಯಾವುದೇ ಹಣವನ್ನು ಕಳುಹಿಸಿಲ್ಲ ಎಂದರೆ ಸರಿಯಲ್ಲ.

13. ನನ್ನ ಮಗ ವೆಂಕಟಶಿವ ರವರು 2015 ರಲ್ಲಿ ತೀರಿಕೊಂಡರು. ನನ್ನ ಮಗ ವೆಂಕಟಶಿವ ರವರು ತೀರಿಕೊಂಡ ಬಳಿಕ ನನ್ನ ಸೊಸೆ 3 ನೇ ಪ್ರತಿವಾದಿ ಲಕ್ಷಾಂತರ ಹಣವನ್ನು ನನಗೆ ನೀಡಿದ್ದಾರೆ ಎಂದರೆ ಸುಳ್ಳು. ನನ್ನ ಮಗನ ಬಳಿಯೇ ಕೋಟ್ಯಾಂತರ ರೂಪಾಯಿ ಇರುವುದರಿಂದ ನಾನು ಆತನಿಗೆ ಯಾವುದೇ ಹಣವನ್ನು ನೀಡುತ್ತಿರಲಿಲ್ಲ, ಆತ ತನ್ನ ಬಳಿ ಇದ್ದ ಹಣದಿಂದಲೇ ಬೆಂಗಳೂರಿನಲ್ಲಿ ಆಸ್ತಿಗಳನ್ನು ಸಂಪಾದಿಸಿದ್ದಾರೆ

ಎಂದರೆ ಸುಳ್ಳು. ನಾನು ಸಾಲ ಮಾಡುವ ಪರಿಸ್ಥಿತಿಯಲ್ಲಿ ಇದ್ದ ಕಾರಣ ನನ್ನ ಮಗ ವೆಂಕಟಶಿವ ರವರಿಗೆ ಹಣವನ್ನು ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

14. ನನ್ನ ಮಗ ವೆಂಕಟಶಿವ ರವರ ಮಗ 4 ನೇ ಪ್ರತಿವಾದಿ ಅಂತಿಮ ಪದವಿಯನ್ನು ಕಲಿಯುತ್ತಿದ್ದಾರೆ. ಯಾವ ಕಾಲೇಜಿನಲ್ಲಿ ಕಲಿಯುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ವೆಂಕಟಶಿವ ರವರು ಬದುಕಿದ್ದಾಗಲೂ ಸಹ 4 ನೇ ಪ್ರತಿವಾದಿ ಯಾವ ಶಾಲೆಯಲ್ಲಿ ಕಲಿಯುತ್ತಿದ್ದ ಎಂದು ನನಗೆ ಗೊತ್ತಿಲ್ಲ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟಶಿವ ಬದುಕಿದ್ದಾಗಿನಿಂದಲೂ ಇಲ್ಲಿಯವರೆಗೂ 4 ನೇ ಪ್ರತಿವಾದಿಯ ವಿದ್ಯಾಭ್ಯಾಸ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

15. ಬಚ್ಚಣ್ಣನವರ ಮಗ ಬೈರಪ್ಪನವರು ನನ್ನ ಮಗನ ಮಾವ. ಬೈರಪ್ಪನವರು ಬೇಗೂರಿನಲ್ಲಿ ವಾಸವಾಗಿದ್ದಾರೆ. ಬೈರಪ್ಪನವರ ಹೆಂಡತಿಯ ಹೆಸರು ರತ್ನಮ್ಮ. ದಿನಾಂಕ 30.09.2013 ರಂದು ಬೈರಪ್ಪನವರು ತಮ್ಮ ಹೆಸರಿನಲ್ಲಿದ್ದ ಆಸ್ತಿಯನ್ನು ನನ್ನ ಮಗ ವೆಂಕಟಶಿವ ರವರ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. 2013 ರಲ್ಲಿ ನನ್ನ ಬಳಿ ರೂ.15,40,000/ ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ವ್ಯವಸಾಯ ಮಾಡುವವರ ಬಳಿ ದಾಖಲೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಬ್ಯಾಂಕ್ ಖಾತೆಯಲ್ಲಿಯೂ ಸಹ ರೂ.15,40,000/ ಹಣ ಇತ್ತು ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸಾಕ್ಷಿ ನಾನು ಬ್ಯಾಂಕಿಗೆ ಹೋಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟಶಿವ ರವರು ತನ್ನ ಬಳಿ ಇದ್ದ

ರೂ.15,40,000/ ಪಾವತಿಸಿ ಬೈರಪ್ಪನವರಿಗೆ ಕ್ರಯಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸುಳ್ಳು. ಆ ಪತ್ರಕ್ಕೆ ಬೈರಪ್ಪ, ಆತನ ಹೆಂಡತಿ ರತ್ನಮ್ಮ, 3 ನೇ ಪ್ರತಿವಾದಿ ಮತ್ತು ಅಮರನಾಥ ರೆಡ್ಡಿ ಸಹಿ ಮಾಡಿದ್ದಾರೆ ಎಂದರೆ ಸರಿ. ನನ್ನ ಮಗ ವೆಂಕಟಶಿವ ರವರು ಖರೀದಿಸಿದ ಆಸ್ತಿಗಳ ಕ್ರಯಪತ್ರಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನನ್ನು ಕರೆಸಿಲ್ಲ, ನಾನು ಆಸ್ಪತ್ರೆಯಲ್ಲಿದ್ದೆ ಎಂದು ನುಡಿಯುತ್ತಾರೆ.

16. ನನ್ನ ಮಗ ವೆಂಕಟಶಿವ ರವರು ನಿಡಿ 15 ಒಪ್ಪಿಗೆ ಕರಾರು ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ರವರು ನಿಡಿ 15 ಕ್ಕೆ ಸಹಿಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ 6, 7, 9 ರಲ್ಲಿರುವ ನನ್ನ ಮಗ ವೆಂಕಟಶಿವ ರವರ ಸಹಿಗೂ ಮತ್ತು ನಿಡಿ 15 ರಲ್ಲಿ ಕಂಡು ಬರುವ ಸಹಿಗೂ ವ್ಯತ್ಯಾಸ ಇದೆ, ನಿಡಿ 15 ರಲ್ಲಿರುವ ಸಹಿ ವೆಂಕಟಶಿವ ರವರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಸಾಕ್ಷಿಗಳು ಇದ್ದಾರೆ ಎಂದು ನುಡಿಯುತ್ತಾರೆ. ನಿಡಿ 15 ರಲ್ಲಿರುವ ಸಹಿಯನ್ನು ಮತ್ತು ಸಾಕ್ಷಿದಾರರನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

17. ನನ್ನ ಮಗ ವೆಂಕಟಶಿವ ರವರು ತೀರಿಕೊಂಡ ಮೇಲೆ ಆತನ ಹೆಸರಿನಲ್ಲಿರುವ ಆಸ್ತಿಗಳನ್ನು ಲಪಟಾಯಿಸಲು ನಿಡಿ 15 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿ ವೆಂಕಟಶಿವ ರವರ ಹೆಸರಿನಲ್ಲಿರುವ ಆಸ್ತಿಗಳ ಒಟ್ಟು ಬೆಲೆ ಎಷ್ಟಾಗುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಒಟ್ಟು ಕುಟುಂಬದಿಂದ ಬರುತ್ತಿದ್ದ ಆದಾಯದಿಂದ ಕುಟುಂಬವನ್ನು ನಿರ್ವಹಣೆ ಮಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ.

18. ನಮ್ಮ ಆಸ್ತಿಗಳ ಪಹಣಿಗಳನ್ನು ಹಾಜರುಪಡಿಸಲು ನನಗೆ ಓಡಾಡಲು ಆಗದೇ ಇದ್ದ ಕಾರಣ ಹಾಜರುಪಡಿಸಲು ಆಗುವುದಿಲ್ಲ. ನನ್ನ ಮಗ ವೆಂಕಟಶಿವ ರವರು ಆಸ್ತಿಗಳನ್ನು ಬೆಂಗಳೂರಿನಲ್ಲಿ ಸಂಪಾದನೆ ಮಾಡುವ ಕಾಲಕ್ಕೆ ನನಗೆ ಮಾವಿನ ಕಾಯಿ, ಹುಣಸೇ ಕಾಯಿಗಳಿಂದ ಆದಾಯ ಇತ್ತು ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸಾಕ್ಷಿ ದಾಖಲೆಗಳು ಇವೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟಶಿವ ರವರು ತನ್ನ ಸ್ವಂತ ಸಂಪಾದನೆಯಿಂದ ಬೆಂಗಳೂರಿನಲ್ಲಿ ಆಸ್ತಿಗಳನ್ನು ಸಂಪಾದಿಸಿದ್ದಾರೆ ಎಂದರೆ ಸುಳ್ಳು. ನನ್ನ ಮಗ ವೆಂಕಟಶಿವ ರವರಿಗೆ ಹಣವನ್ನು ನೀಡುವಷ್ಟು ಆದಾಯ ನನ್ನ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಕಾಲದಿಂದಲೂ ಸಾಲ ಮಾಡಿಯೇ ಜೀವನ್ನು ನಿರ್ವಹಿಸುತ್ತಿದ್ದೇನೆ, ನನ್ನ ಮಗ ಓದಿದ ಕಾರಣ ಬೆಂಗಳೂರಿಗೆ ಹೋಗಿ ಕೆಲಸವನ್ನು ಆರಂಭಿಸಿದ್ದ ಎಂದರೆ ಸುಳ್ಳು.

**ನ್ಯಾಯಾಲಯ ಪ್ರಶ್ನೆ:** ನಿಮ್ಮ ಮಗ ವೆಂಕಟಶಿವ ಎಲ್ಲಿಯವರೆಗೂ ಕಲಿತಿದ್ದ ?

**ಉತ್ತರ:** ಎಸ್.ಎಸ್.ಎಲ್.ಸಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದಂದ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿಂತಾಮಣಿ.